1884ನೇ ಇಸವಿ ಮಿಸಲೇನಿಯಸ್ ನಂಬರ್ 21.

ಮೃತಪಟ್ಟ ಚಿಕ್ಕಮಗಳೂರು ತಾ॥ ಕಳವಾಸೆ ಪಟೇಲ್ ಶಿದ್ದೇಗವ್ವಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಮಲ್ಲೇಗವ್ವಡನು, ಮೃತಪಟ್ಟ ಸದರೀ ಶಿದ್ದೇಗವ್ವಡನು ಅಂಣನಾಗಬೇಕೆಂಬ ಹಕ್ಕು ದಾರಿಮೇಲೆ ಕಳವಾಸೇ ಮಲ್ಲೇಗವ್ವಡನು ಸದರೀ ವಾಸಸ್ಥನಾಗಿ ಮೃತಪಟ್ಟ ಶಿದ್ದೇಗವ್ವಡನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮಲ್ಲೇಗವ್ವಡನ ಅರ್ಜಿಯನ್ನು 1884ನೇ ಇಸವೀ ಏಪ್ರಲ್ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿದ್ದೇಗವ್ವಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಫಿಬ್ರವರೀ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಮಿಸಲೇನಿಯಸ್ ಕೇಸ್ ನಂಬರ್ 22.

ಮೃತಪಟ್ಟ ಚಿಕ್ಕಮಗಳೂರು ಟವ್ನ ಮಳಲೂರು ಹುಸ್ಸೇನಸಾಬಿ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮಿನ್ನಿ ಹೈದರಸಾಹೆಬನು, ಮೃತಪಟ್ಟ ಹುಸ್ಸೇನಸಾಬಿಯು ಪಾಲದಾರ ಮತ್ತು ಭಾವನಾಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಮಗಳೂರು ಟವನ್ನಲ್ಲಿ ವಾಸಸ್ಥನಾಗಿ ಮೃತಪಟ್ಟ ಹುಸ್ಸೇನಸಾಬಿಯ ಜಿಂದಗೀ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಹೈದರಸಾಬನ ಅರ್ಜಿಯನ್ನು 1884ನೇ ಇಸವಿ ಏಪ್ರಿಲ್ 3ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹುಸ್ಸೇನಸಾಹೆಬನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 28ರಲ್ಲು ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಬಿ. ತಿರುಮಲಾಚಾರಿ,
ಸಬ್ ಜಡ್ಜ್.

ಸ್ರ್ 1884ನೇ ಇಸವಿ ಜನವರೀ ಮೂಹೇ ಬಾಬತು ಕಾಲಸ್ಥಿತೀ ರಿಪ್ರೋರ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ—ಸದರೀ ತಿಂಗಳಲ್ಲಿ ಮಳೆ ಇಲ್ಲ.

ಫಸಲ್‌ಗಳು—ಬೆಳೆಯಲ್ಲಿರತಕ್ಕ ಫಸಲ್‌ಗಳು ಒಳ್ಳೇಸ್ಥಿತಿಯಲ್ಲಿ ಇರುವದಾಗಿ ರಿಪೊರ್ಟಾಗಿರುತ್ತೆ.

ಜನಾರೋಗ್ಯ—ಸಾಧಾರಣವಾಗಿ ಚನ್ನಾಗಿದೆ.

ಜಾರ್ವಾರ್‌ಗಳು—ಆರೋಗ್ಯ ತೃಪ್ತಿಕರವಾಗಿದೆ. ಯಲ್ಲಾ ಕಾರಣಗಳಿಂದಲೂ 1,740 ಮೃತಪಟ್ಟವು; ಇವುಗಳ ಪೈಕೀ 202 ದುಷ್ಟ ಮೃಗಗಳಿಂದ ಕೊಲ್ಲಲ್ಪಟ್ಟವು, ಮತ್ತು 5 ಗೋವಾರೋಗದಿಂದ ಸತ್ತವು.

ಜನಮರಣ—ಡಿಶಂಬರ್ ಮಾಹೆಯಲ್ಲಿ 744 ಮಂದಿಯೂ ಅದರ ಹಿಂದಿನ ತಿಂಗಳಲ್ಲಿ 689 ಮಂದಿಯೂ ಮೃತಪಟ್ಟರು, ಮೊಕಾಬಿಲಾ 55 ಜಾಸ್ತಿ.

ಜಮಿರ್ಾಗಳು—1,729—13—0 ಕಂದಾಯವುಳ್ಳ ಜಮಿರ್ಾಗಳು ಸಾಗುವಳಿಗೆ ತೆಗದುಕೊಳ್ಳಲ್ಪಟ್ಟವು. ರಾಜೀನಾಮೆ ಯಾವದೂ ಇಲ್ಲ.

ಇ. ಸಿ. ಷಣ್ಮುಗವೇಲು ಪಿಳ್ಳೆ,
ಫಾರ್ ಆಫಿಷಿಯೇಟಿಂಗ್ ಜೆ॥ ಕಮ್ಮಿಷನರ್.